ಇಲ್ಲಿಗೆ ಬರುತ್ತೆ. ನೈಟ್ ಡ್ರೈವರ್‌ಗೆ ಅಂತ ಐದು ಸಾವಿರ ಎಕ್ಸ್‌ಟ್ರಾ ಕೊಟ್ಟಿದ್ದೀನಿ ಸರ್. ಎಲ್ಲಾ ನನ್ನ ಕರ್ಮ ಸರ್."

"ರೀ ಸಪ್ಲಯರ್ ರಾಮಸ್ವಾಮಿ, ಇರೋ ಆಕ್ಸಿಜನ್ ಮೂರು ಗಂಟೆ ಮಾತ್ರ ಬರೋದ್ರೀ. ಆ ಮಿನಿಸ್ಟ್ರ ಪಿಎ ಬೇರೆ ಫೋನ್ ಮಾಡ್ತಾನೇ ಇದ್ದಾನೆ."

"ಏ ಆ ವಿಷಯ ಬಿಡ್ರೀ ಸರ್. ಹನ್ನೊಂದು ಗಂಟೆಗೇ ನಮ್ಮ ಹುಡುಗ ಅಲ್ಲಿಗೆ ವಿಸಿಟ್ ಹಾಕಿದ್ದ. ಆಮೇಲೆ ನಿಮಗೆ ಫೋನ್ ಬಂದಿಲ್ಲಾ, ಅಲ್ವಾ ಸಾರ್?"

"ಹೌದಲ್ಲಾ! ಆಮೇಲೆ ಬಂದಿಲ್ಲ..."

"ಬೇವರ್ಸಿಗಳು ಸಾರ್. ಉಚ್ಚೆಯಲ್ಲಿ ಮೀನು ಹಿಡಿಯೋ ಮಕ್ಕಳು ಇವರು. ದಕ್ಷಿಣೆ ಬಂದ ಕೂಡ್ಲೇ ಎಲ್ಲಾ ಬಂದ್ ಆಗಿಬಿಡ್ತದೆ. ದೇವರು ದೊಡ್ಡೋನು ಸರ್. ಆನ್‌ಲೈನ್‌ನಲ್ಲಿ ನನ್ನ ಪೇಮೆಂಟ್ ಆಗ್ತಾಯಿದೆ. ಈ ಬಿಲ್ಲುಗಳಿಗೆ ಒಂದು ಸೈನ್ ಹಾಕಿಬಿಡಿ ಸಾರ್" ಎನ್ನುತ್ತಾ ಟೇಬಲ್ ಮೇಲೆ ಕೆಂಪು–ಹಳದಿ ಬಣ್ಣದ ಬಿಲ್ಲುಗಳನ್ನು ಇಟ್ಟ.

ಒಟ್ಟು ಐದು ಟನ್ ಸಪ್ಲೈ ಆಗಿದೆ ಅನ್ನೋ ಲೆಕ್ಕ ಅಲ್ಲಿತ್ತು. "ಅಲ್ಲರಿ ರಾಮಸ್ವಾಮಿ, ಐದು ಟನ್ ಅಂತಿದೆ..." ರಾಘವನ್ ಮಾತು ಮುಗಿಸೋ ಮುನ್ನವೇ, "ಸಾರ್, ಸ್ಟಾಕ್ ರೂಂ ಸೂಪರ್‌ವೈಸರ್ ಮತ್ತು ಛೀಫ್ ಇಬ್ಬರೂ ಸೈನ್ ಹಾಕಿದ್ದಾರೆ ನೋಡಿ ಸಾರ್" ಎಂದ ರಾಮಸ್ವಾಮಿ. ಮುಚ್ಕೊಂಡು ಸೈನ್ ಹಾಕು ಮಗನೆ ಅಂತ ರಾಮಸ್ವಾಮಿ ಹೇಳೋ ರೀತಿ ಇದು. ಪ್ರಮಾಣ ನೋಡೋದು ನನ್ನ ಕೆಲಸ ಅಲ್ಲ. ಇಂತಿಷ್ಟು ದಿನ ಐಸಿಯುನಲ್ಲಿ ಆಕ್ಸಿಜನ್ ಸಪ್ಲೈ ಇತ್ತು ಅಂತ ಹೇಳೋದಷ್ಟೆ ನನ್ನ ಕೆಲಸ ಅಂದುಕೊಂಡ ರಾಘವನ್, ರಾಮಸ್ವಾಮಿ ಹೇಳಿದ ಹಾಗೆ ಮುಚ್ಕೊಂಡು ಸೈನ್ ಹಾಕಿದರು. ಎಲ್ಲಾ ಬಿಲ್ಲುಗಳನ್ನು ಎತ್ತಿಕೊಂಡ ರಾಮಸ್ವಾಮಿ, "ಬರ್ತೀನಿ ಸರ್. ಇವನ್ನು ಸ್ಕ್ಯಾನ್ ಮಾಡಿ ಆನ್‌ಲೈನ್‌ನಲ್ಲಿ ಅಪ್‌ಲೌಡ್ ಮಾಡ್ಬೇಕು" ಅಂತ ಅಲ್ಲಿಂದ ಹೊರಟ. ಬಾಗಿಲ ಬಳಿ ಹೋದವನು, "ಸಾರ್, ನಾಳೆ ಇರ್ತೀರಾ? ನಿಮ್ಮನ್ನ ನೋಡೋದಿತ್ತು..." ಅಂತ ನಿಂತ. ಅವನೆಡೆಗೆ ತಲೆಯನ್ನು ಎತ್ತದೆ ರಾಘವನ್, "ನೋ ಪ್ರಾಬ್ಲಂ" ಎಂದರು. ತಲೆಯಾಡಿಸಿದ ರಾಮಸ್ವಾಮಿ ಅಲ್ಲಿಂದ ಹೊರಟ.

ಈಗ ತಲೆಯಾಡಿಸಿ ಹೊರಟವನು ರಾಮಸ್ವಾಮಿ, ದ ಸಪ್ಲಯರ್ ಅಲ್ಲ, ರಾಮಸ್ವಾಮಿ, ದ ಪೇಶೆಂಟ್! ಎಂಟು ವರ್ಷದಿಂದ ಬಲ್ಲ ವ್ಯಕ್ತಿ ರಾಮಸ್ವಾಮಿ. ಅವ ಯಾವಾಗಲೂ ಸ್ಪಷ್ಟವಾಗಿರುತ್ತಿದ್ದ. ಟ್ರೀಟ್‌ಮೆಂಟ್ ಬೇಕಿದ್ದರೆ ತಮಾಷೆಯಾಗೇ "ಸಾರ್, ರಾಮಸ್ವಾಮಿ, ದ ಪೇಸೆಂಟ್" ಎಂದು ಹಾಜರಾಗುತ್ತಿದ್ದ. ರಾಘವನ್ನರಿಗೆ ರಾಮಸ್ವಾಮಿಯ ಕ್ಯಾಪಸಿಟಿ ಬಗ್ಗೆ ಅಚ್ಚರಿಯಿತ್ತು. ಹತ್ತಾರು ಆಸ್ಪತ್ರೆಗಳಿಗೆ ಆಕ್ಸಿಜನ್ ಸಪ್ಲೈ ಮಾಡೋ ವ್ಯಕ್ತಿ. ದ ಸಪ್ಲೈಯರ್ ಆಗಿ ಮುಂದೆ ನಿಂತರೆ ಪಕ್ಕಾ ವ್ಯವಹಾರಸ್ಥ. ಪ್ರತಿ ಕಾಸಿಗೂ ಲೆಕ್ಕ. ರಾಮನ ಲೆಕ್ಕನೂ ಪಕ್ಕಾ. ಕೃಷ್ಣನ ಲೆಕ್ಕನೂ ಪಕ್ಕಾ. "ನೀವು ಬಿಡಿ ಸಾರ್. ರಾಮನ ಲೆಕ್ಕದವರು. ನಿಮ್ಮ ಜೊತೆ ಮಾತಾಡೋದು ಸುಲಭ" ಅನ್ನುತ್ತಲೇ ರಾಮಸ್ವಾಮಿ ಎಂಟು ವರ್ಷದ ಹಿಂದೆ ದ ಪೇಸೆಂಟಾಗಿ ಬದಲಾಗಿದ್ದ. ಬಡ್ಡೀ ಮಗ, ಇಲ್ಲೂ ನಿಯತ್ತಿನ ಪ್ರಾಣಿ. ವೈದ್ಯರ ಮಾತನ್ನು ಮೀರದ ರೋಗಿ.

ಬಾಗಿಲು ಎಳೆಯುತ್ತ ಹೊರಗೆ ಕಾಲಿಟ್ಟಿದ್ದ ರಾಮಸ್ವಾಮಿಯನ್ನು, "ರೀ ಸ್ವಾಮಿ" ಎಂದರು ರಾಘವನ್. ಹೊರ ಹೋಗುತ್ತಿದ್ದ ರಾಮಸ್ವಾಮಿ ಹಿಂತಿರುಗಿ ಬಂದು ಎದುರಿಗೆ ನಿಂತ. "ಮೂರು ಗಂಟೆ ಮಾತ್ರ ಸ್ಟಾಕ್ ಇದೇ ಕಂಡ್ರೀ. ಹನ್ನೆರಡು ಜನ ಪೇಶೆಂಟ್‌ಗಳಿದ್ದಾರೆ. ಏಳು ಬಾಡಿ ಡೆಲಿವರಿ ಅರ್ಧ ಗಂಟೇಲಿ ಆಗಬೇಕಿದೆ" ಅಂದ್ರು. ರಾಮಸ್ವಾಮಿ ರಾಘವನ್ನರನ್ನೇ ನೋಡುತ್ತಾ ನಿಂತ. "ಅದರಲ್ಲಿ ಅಲ್ಲಾ ಎಷ್ಟು? ಶಿವಾ ಎಷ್ಟು? ಸಾರ್" ತಲೆ ಕೆರೆದುಕೊಂಡ ರಾಘವನ್ ಅಲ್ಲಾ ಮೂರು, ಶಿವಾ ನಾಲ್ಕು ಎಂದ್ರು.